ಮೂಲ ದಾವಾ ಸಂಖ್ಯೆ 48/2016

ಪಿ.ಡಬ್ಲ್ಯೂ-1

**ದಿಃ 15.11.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ವಿ ಜಿ ಪಿ ವಕೀಲರಿಂದಃ -**

ದಿನಾಂಕ 17.11.1959 ರಲ್ಲಿ ಶೃಂಗೇರಿ ಮಠದ ಜಿ ಪಿ ಎ ಹೋಲ್ಡರ್ ರವರಾದ ಅಗ್ನಿಹೋತ್ರಿ ನರಸಿಂಹಭಟ್ ರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಅವರಿಗೆ ಯಾವ ರೀತಿ ಅಧಿಕಾರ ಇತ್ತು ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಏನು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ನೋಂದಣಿ ಪತ್ರ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನೋಂದಣಿ ಪತ್ರ ಅದು ಯಾವುದು ಎಂದರೆ ಕ್ರಯ ಪತ್ರ ಎನ್ನುತ್ತಾರೆ ನೀವು ಆ ರೀತಿ ಯಾವುದೇ ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ ನೀವು ದಾವಾ ಆಸ್ತಿಯಲ್ಲಿ ಎಂದೂ ಸಹ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನೀವು ಈ ದಾವೆಯನ್ನು 1 ರಿಂದ 6 ನೇ ಪ್ರತಿವಾದಿಯರನ್ನು ಅನಾವಶ್ಯಕವಾಗಿ ಹೂಡಿದ್ದೀರಾ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವಶ್ಯಕ ಇರುವ ಕಾರಣ ಹಾಕಿರುತ್ತೇವೆ ಎನ್ನುತ್ತಾರೆ. ನೀವು ದಾವೆಯಲ್ಲಿ 1 ರಿಂದ 6 ನೇ ಪ್ರತಿವಾದಿಯರ ವಿರುದ್ಧ ನಿರ್ದಿಷ್ಟವಾದ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 6 ನೇ ಪ್ರತಿವಾದಿಯರ ಪರವಾಗಿ ಏನು ಪರಿಹಾರವನ್ನು ವಾದ ಪತ್ರದಲ್ಲಿ ಕೇಳಿದ್ದೀರಾ ನೋಡಿ ಹೇಳಿ ಎಂದು ಈಗ ತೆರೆದ ನ್ಯಾಯಾಲಯದಲ್ಲಿ ವಾದ ಪತ್ರವನ್ನು ಸಾಕ್ಷಿಗೆ ತೋರಿಸಿದಾಗ 1 ರಿಂದ 6 ನೇ ಪ್ರತಿವಾದಿಯರ ವಿರುದ್ಧ ಪರಿಹಾರ ಏನು ಕೇಳಿರುವುದಿಲ್ಲ ಎನ್ನುತ್ತಾರೆ. 1 ರಿಂದ 6 ನೇ ಪ್ರತಿವಾದಿಗಳು ಕಾನೂನು ಬಾಹೀರವಾಗಿ 7 ರಿಂದ 20 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಕ್ವಾರಿ ಮಾಡಲು ಅನುಮತಿ ಕೊಟ್ಟಿರುವ ಕಾರಣ ಅವರ ವಿರುದ್ಧ ಹೂಡಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿ ಎಷ್ಟು ಎಕರೆಗೆ ನೀವು ಕ್ಲೇಮ್ ಮಾಡಿದ್ದೀರಾ ಎಂದರೆ ದಾವಾ ಆಸ್ತಿ 7 ಎಕರೆ ಕ್ಲೇಮ್ ಮಾಡಿದ್ದೇನೆ ಎನ್ನುತ್ತಾರೆ. 1 ರಿಂದ 6 ನೇ ಪ್ರತಿವಾದಿಗಳು 7 ಎಕರೆ ಜಮೀನಿನಲ್ಲಿ ಕಾನೂನು ಬಾಹೀರವಾಗಿ ಕ್ವಾರಿ ಮಾಡಲು

ಕೊಟ್ಟಿದ್ದಾರೆಂದು ಹೇಳುತ್ತೀರಲ್ಲಾ ದಾವಾ ಆಸ್ತಿಯಲ್ಲಿ ಎಷ್ಟು ಎಕರೆ ಯಾರು ಯಾರಿಗೆ ಕೊಟ್ಟಿದ್ದಾರೆಂದು ಹೇಳುತ್ತೀರಾ ಎಂದರೆ ಸಂತೋಷ, ಆನಂದ ಎನ್ನುವವರಿಗೆ ಕೊಟ್ಟಿದ್ದಾರೆ. ಎಷ್ಟು ಎಷ್ಟು ಎಕರೆ ಕೊಟ್ಟಿದ್ದಾರೆ ಗೊತ್ತಾ ಎಂದರೆ ಸಾಕ್ಷಿಯು 2 ಎಕರೆ ಒಬ್ಬರಿಗೆ 3 ಎಕರೆ ಒಬ್ಬರಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಇನ್ನೂ ಉಳಿದ 2 ಎಕರೆ ಜನಾರ್ಧನ ಮತ್ತು ಅಮೋಘ ಎನ್ನುವವರಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಆನಂದ ಎಂಬುವವರನ್ನು ನೀವೇನಾದರು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಆನಂದ ರವರನ್ನು ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ಪ್ರತಿವಾದಿ 1 ರಿಂದ 6 ರವರಿಂದ ಯಾವುದೇ ತೊಂದರೆ ಇಲ್ಲದಿದ್ದರೂ ಕೂಡ ಅನಾವಶ್ಯಕವಾಗಿ 1 ರಿಂದ 6 ನೇ ಪ್ರತಿವಾದಿಗಳ ವಿರುದ್ದ ಈ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. 1 ರಿಂದ 6 ನೇ ಪ್ರತಿವಾದಿಗಳು ಸರ್ಕಾರದ ಪರವಾಗಿ ಅವರ ಕರ್ತವ್ಯವನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ.

**(7 ರಿಂದ 9 ಮತ್ತು 12 ನೇ ಪ್ರತಿವಾದಿಗಳ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯವ ಕೋರಿದ್ದು ಅನುಮತಿಸಲಾಯಿತು.)**

**(13-14 ನೇ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.